# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **908**

2 ಸದಸ್ಯರ ಹೆಸರು : **ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)**

3 ಉತ್ತರಿಸಬೇಕಾದ ದಿನಾಂಕ : **22.02.2024**

4 ಉತ್ತರಿಸುವ ಸಚಿವರು : **ಗೃಹ ಸಚಿವರು**

| ಪ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಗೃಹ ಇಲಾಖೆಯಲ್ಲಿ ಸಹಾಯಕ ಸಬ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್, ಡಿವೈ.ಎಸ್.ಪಿ. ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಸಾಂದರ್ಭಿಕ ರಜೆ (ಸಿ.ಎಲ್.) ಪಡೆಯಲು ಅವಕಾಶವಿದ್ದರೂ, ಹಲವು ಕಾರಣಗಳಿಂದ ಮೇಲಾಧಿಕಾರಿಗಳು ಮೌಖಿಕವಾಗಿ ರಜೆ ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಹಾಯಕ ಸಬ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್, ಡಿವೈ.ಎಸ್.ಪಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳಿಗೆ ನಿಯಮಾನುಸಾರ ಸಾಂದರ್ಭಿಕ ರಜೆಯನ್ನು (ಸಿ.ಎಲ್) ಹಾಗೂ ಪತ್ರಾಂಕಿತ ರಜಾ ಅನುಮತಿಯನ್ನು ಮಂಜೂರು ಮಾಡಲಾಗುತ್ತಿದೆ. |
| (ಆ) | ಸದರಿಯವರಿಗೆ ರಜಾ ನೀಡದೆ ಇರುವುದರಿಂದ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿರುವುದು ಹಾಗೂ ಕಾರ್ಯ ಕ್ಷಮತೆಯಲ್ಲಿ ಕೊರತೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| (ಇ) | ಹಾಗಾದಲ್ಲಿ, ಇದನ್ನು ತಡೆಗಟ್ಟಲು ಪೊಲೀಸರು ಹಾಗೂ ಮುಖ್ಯಪೇದೆಗೆ ನೀಡಲಾಗುವ ವಾರದ ರಜೆಯಂತೆ (ವೀಕ್ಲಿ ಆಫ್) ಮೇಲ್ಕಂಡ ಸದರಿ ಅಧಿಕಾರಿಗಳಿಗೂ ಕಡ್ಡಾಯವಾಗಿ ವಾರಕ್ಕೆ ಒಂದು ರಜೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಪಿಸಿ ಮತ್ತು ಹೆಚ್.ಸಿ. ವೃಂದಗಳಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ವಾರದ ರಜೆಯನ್ನು ಮಂಜೂರು ಮಾಡಿದ ಸಂದರ್ಭದಲ್ಲಿ ಬದಲಿಯಾಗಿ ಇತರೆ ಸಿಬ್ಬಂದಿಗಳನ್ನು ನಿಯೋಜಿಸಬಹುದಾಗಿದೆ.<br><br>ಪಿಎಸ್.ಐ, ಪಿಐ ವೃಂದದ ಅಧಿಕಾರಿಗಳು ಠಾಣಾಧಿಕಾರಿಗಳಾಗಿ ಮತ್ತು ಡಿವೈಎಸ್.ಪಿ ವೃಂದದ ಅಧಿಕಾರಿಗಳು ಉಪವಿಭಾಗ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ವೃಂದದಲ್ಲಿ ಕಾರ್ಯ ನಿರ್ವಹಿಸುವ ಅಧಿಕಾರಿಗಳಿಗೆ ವಾರದ ರಜೆಯನ್ನು ಮಂಜೂರು ಮಾಡಿದಲ್ಲಿ, ಬದಲಿಯಾಗಿ ಇತರೆ ಅಧಿಕಾರಿಗಳನ್ನು ಕರ್ತವ್ಯಕ್ಕೆ ನಿಯೋಜಿಸುವುದು ಕಷ್ಟ ಸಾಧ್ಯವಾಗಿರುತ್ತದೆ.<br><br>ಪೊಲೀಸ್ ಅಧಿಕಾರಿಗಳಿಗೆ ಅವರ ಹಕ್ಕಿನಲ್ಲಿರುವ ಸಾಂದರ್ಭಿಕ ರಜೆ, ಗಳಿಕೆ ರಜೆ, ಪರಿವರ್ತಿತ ರಜೆ ಹಾಗೂ ಪತ್ರಾಂಕಿತ ರಜಾ ಅನುಮತಿಯನ್ನು ನಿಯಮಾನುಸಾರ ಮಂಜೂರು ಮಾಡಲಾಗುತ್ತಿದೆ. |
| (ಈ) | ಯಾವ ಕಾಲಮಿತಿಯಲ್ಲಿ ಸದರಿ ರಜೆ ಸೌಲಭ್ಯ ನೀಡಲಾಗುವುದು? | ಅನ್ವಯಿಸುವುದಿಲ್ಲ. |

ಸಂಖ್ಯೆ: ಒಇ 51 ಪಿಇಜಿ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು